

ಡಾ.ವಿನೋದ ಛೆಬ್ಬಿ

ಪುರುಷರ ಹಾಗೂ ಪುರುಷತ್ವದ ನಡುವೆ ದಿಗ್ಭ್ರಮೆ ಆಗುವಷ್ಟು ವಿರೋಧಾಭಾಸ ಇದೆ!

# 192: ಪುರುಷರ ನಾಕನರಕ: 1

ಕೆಲವು ವರ್ಷಗಳಿಂದ ಮಹಿಳೆಯರ ಮೇಲಿನ ಅತ್ಯಾಚಾರಗಳು ಸುದ್ದಿಯ ಮುಂಚೂಣಿಯಲ್ಲಿರುವುದು ನಮಗೆಲ್ಲ ಗೊತ್ತಿರುವ ಸಂಗತಿ. ಇತ್ತೀಚಿನ **#MeToo** ಪ್ರಕರಣಗಳಲ್ಲಿ ಸಭ್ಯರೆಂದು ಅನ್ನಿಸಿಕೊಳ್ಳುವ ಹೆಸರಾಂತರೆಲ್ಲ ಬಯಲಿಗೆ ಬರುತ್ತಿದ್ದಾರೆ. ಮುಂದುವರಿದ ದೇಶಗಳಲ್ಲೂ ಮಹಿಳೆಯನ್ನು ದುರುಪಯೋಗ ಪಡಿಸಿಕೊಳ್ಳಲು ಪುರುಷರು ಹಿಂದೆ ಬಿದ್ದಿಲ್ಲ. ಆದರೆ ನಾನೀಗ ಹೇಳಲು ಹೊರಟಿರುವುದು ಅವರ ಬಗೆಗಲ್ಲ. ಬದಲಾಗಿ, ಅಪರಾಧಿ ಮನೋಭಾವ ಇಲ್ಲದ ಪುರುಷರ ಬಗೆಗೆ. ಯಾವುದೇ ಹೆಣ್ಣಿನ ಸಂಪರ್ಕಕ್ಕೆ ಬರುವ, ಅವಳ ಬದುಕಿನ ಭಾಗವಾಗುವ ಗಂಡಸರು, ಸ್ನೇಹಿತರು, ಸಹೋದ್ಯೋಗಿಗಳು, ಪ್ರಿಯಕರ, ಗಂಡ, ತಂದೆ, ಮಗ ಹೀಗೆ ನಾನಾ ರೂಪಗಳಲ್ಲಿ ಕಾಣಿಸಿಕೊಳ್ಳುವ ಸರ್ವೇಸಾಮಾನ್ಯ ಪುರುಷರ ಬಗೆಗೆ ಮಾತಾಡುತ್ತಿದ್ದೇನೆ. ಕಾರಣ ಏನೆಂದರೆ, ನನ್ನ ವೃತ್ತಿಯಲ್ಲಿ ಸಾವಿರಾರು ಪುರುಷರನ್ನು ತೀರಾ ಹತ್ತಿರದಿಂದ ಕಂಡಿದ್ದೇನೆ. ಅವರೆಲ್ಲ ಗಂಡಸಾಗಿರುವುದಕ್ಕೆ ತಮ್ಮ ಅಂತರಂಗದ ತೊಳಲಾಟವನ್ನು–ಬಹುಶಃ ಮೊಟ್ಟಮೊದಲ ಸಲ ಹೊರಹಾಕಿದ್ದಾರೆ. ಗಂಡಸಾಗಿ ಕರ್ತವ್ಯದ ಹೊರೆ, ತಿರಸ್ಕಾರ, ಅವಮಾನ, ಆಘಾತ, ಪ್ರೇಮಕಾಮ, ಬಯಕೆನಿರಾಸೆ, ಭಗ್ನಪ್ರಣಯ, ಮುಂತಾಗಿ ಹೃದಯದ ನೋವನ್ನು ಹಂಚಿಕೊಂಡಿದ್ದಾರೆ. ಅದರಿಂದ ನಾನು ಮೂಕ ವಿಸ್ಮಿತನಾಗಿದ್ದೇನೆ. ದಿಗ್ಭ್ರಮೆಗೊಂಡಿದ್ದೇನೆ. ಸಾಮಾನ್ಯವಾಗಿ ಬೆಳಕಿಗೆ ಬಾರದ ಗಂಡಸರ ಮನದಾಳವನ್ನು ಕೆಲವು ದೃಷ್ಟಾಂತಗಳ ಮೂಲಕ ನಿಮ್ಮ ಮುಂದಿಡುತ್ತಿದ್ದೇನೆ.

ದೃಷ್ಟಾಂತ ಒಂದು: ಹತ್ತೊಂಬತ್ತರ ನವತರುಣ ಸಲಹೆ ಕೇಳಿದ್ದಾನೆ: ಹಿರಿಯ ಮಹಿಳೆಯನ್ನು ಲೈಂಗಿಕವಾಗಿ ತೃಪ್ತಿಪಡಿಸುವುದು ಹೇಗೆ? ವಿವರ ಕೇಳಿದಾಗ ಗೊತ್ತಾಗಿದ್ದು ಇದು: ಮೂವತ್ತು ವರ್ಷದ ಸಂಸಾರಸ್ಥ ಮಹಿಳೆಯು ಇವನನ್ನು ಕೂಟಕ್ಕೆ ಆಹ್ವಾನಿಸಿದ್ದಾಳೆ. ಇಲ್ಲಿಯ ತನಕ ಹಸ್ತಮೈಥುನದ ಅನುಭವ ಮಾತ್ರ ಇರುವ ಇವನಿಗೆ ಹೆಣ್ಣನ್ನು  ಅದರಲ್ಲೂ ಅನುಭವಸ್ಥ ಹೆಣ್ಣನ್ನು–ತೃಪ್ತಿಪಡಿಸುವ, ಅವಳಿಂದ ಭಲೇ ಅನ್ನಿಸಿಕೊಳ್ಳುವ, ತನ್ನ ಕಾಲಿಗೆ ತಾನೇ ನಮಸ್ಕರಿಸುವ ಮಹದಾಸೆ. ಈ ವಿಚಾರ ಹೇಗೆ ಹುಟ್ಟಿತು ಎಂದುದಕ್ಕೆ ಅವನು ಮುಂದಿಟ್ಟ ತರ್ಕ ವಿಲಕ್ಷಣವಾಗಿತ್ತು. ಮಹಿಳೆಯು ತನ್ನ ಗಂಡನ ಜಾಗದಲ್ಲಿ ಇವನನ್ನು ಆರಿಸಿಕೊಂಡಿರಬೇಕಾದರೆ ಗಂಡ ಕೊಡುವುದಕ್ಕಿಂತ ಹೆಚ್ಚಿನ ಸುಖವನ್ನು ಇವನು ಕೊಡಬೇಕು! ನನ್ನ ಪ್ರಶ್ನೆ ಏನೆಂದರೆ, ಏನೇನೂ ತಿಳಿವಳಿಕೆ ಇಲ್ಲದ ಅವನಿಗೆ ಅನುಭವಸ್ಥಳಿಂದ ಕಲಿತುಕೊಳ್ಳಬೇಕು ಎಂಬ ವಿಚಾರ ಯಾಕೆ ಬರಲಿಲ್ಲ? ಗಂಡಸಾಗಿ ಹುಟ್ಟಿದ ತನಗೆ 'ಎಲ್ಲವೂ' ಗೊತ್ತಿರಬೇಕು ಎಂಬ ನಂಬಿಕೆಯೇ ಇದರ ಹಿಂದೆ ಇರುವುದು ಸ್ಪಷ್ಟವಾಗುತ್ತದೆ. ನಮ್ಮ ಸಂಸ್ಕೃತಿಯ ಭಾಷೆಯಲ್ಲಿ ಹೇಳಬೇಕೆಂದರೆ, ಸೀತೆಯು ಪಾತಿವ್ರತ್ಯವನ್ನು ಸಿದ್ಧಪಡಿಸಲು ಅಗ್ನಿಪರೀಕ್ಷೆಗೆ ಒಳಗಾದಂತೆ ಗಂಡು ತನ್ನ ಗಂಡಸುತನವನ್ನು ಸಿದ್ಧಪಡಿಸಿಕೊಳ್ಳಲು ಆಗಾಗ ಅಗ್ನಿಪರೀಕ್ಷೆಗೆ ಒಳಪಡುತ್ತ ಇರುತ್ತಾನೆ. ಗೆದ್ದರೇನೋ ಬದುಕಿದ, ಆದರೆ ಸೋತರೆ ಏನಾಗಬಹುದು? ಅದಕ್ಕೆ ಇನ್ನೊಂದು ದೃಷ್ಟಾಂತ:

ದೃಷ್ಟಾಂತ ಎರಡು: ಮದುವೆಯನ್ನು ನಿರಾಕರಿಸುತ್ತ ಬಂದಿದ್ದ ಈ ಸಂಭಾವಿತನನ್ನು ತಾಯ್ತಂದೆಯರು ನನ್ನಲ್ಲಿ ಕರೆದುಕೊಂಡು ಬಂದಿದ್ದರು. ಇವನ ಸಮಸ್ಯೆ ಏನೆಂದರೆ ಶೀಘ್ರಸ್ಖಲನ. (ಅಂದಹಾಗೆ ಲೈಂಗಿಕ ತಜ್ಞರ ವೃತ್ತಿಯಲ್ಲಿ ಕಂಡುಬರುವ ಸಮಸ್ಯೆಗಳಲ್ಲಿ ಮುಕ್ಕಾಲು ಪಾಲು ಶೀಘ್ರಸ್ಖಲನಕ್ಕೇ ಸಂಬಂಧಪಟ್ಟಿವೆ ಎಂದರೆ ಹೆಚ್ಚಿನ ಗಂಡಸರ ತಲೆಯಲ್ಲಿ ಏನಿರಬಹುದು ಎಂದು ನೀವೇ ಊಹಿಸಿ!) ಅದನ್ನು ಬಗೆಹರಿಸಿಕೊಳ್ಳುವ ತನಕ ಮದುವೆ ಬೇಡವೆಂದು ಇವನ ವಿಚಾರ. ನಂಬಿಕಸ್ಥಳಾಗಿ ನೆರವು ನೀಡುವ ಸಂಗಾತಿ ಇಲ್ಲದೆ ಅವನ ಸಮಸ್ಯೆ ಸರಿಹೋಗುವುದಾದರೂ ಹೇಗೆ ಎಂದು ನನ್ನ ಸವಾಲು. ತನ್ನ ಆತಂಕವನ್ನು ಹೆಂಡತಿ ಆಗುವವಳ ಜೊತೆಗೆ ಮುಂಚೆಯೇ ಹಂಚಿಕೊಂಡರೆ ಅವಳು ಅರ್ಥಮಾಡಿಕೊಂಡು ಸಹಕರಿಸುತ್ತಾಳೆ, ಶೀಘ್ರಸ್ಖಲನ ಕ್ರಮೇಣ ಸರಿಹೋಗುತ್ತದೆ ಎಂದು ಸಲಹೆ ಕೊಟ್ಟೆ. ಆದರೆ, ಇವನು ಹೇಳಿಕೊಳ್ಳಲು ಧೈರ್ಯ ಮಾಡಲೇ ಇಲ್ಲ. ಮೊದಲ ರಾತ್ರಿ ಹೆಂಡತಿಯ ಹತ್ತಿರ ಹೋಗುವಾಗ ಎಷ್ಟೊಂದು ಆತಂಕ ಇತ್ತೆಂದರೆ ಬಟ್ಟೆ ಬಿಚ್ಚುವ ಮುಂಚೆಯೇ ಸ್ಖಲನವಾಯಿತು. ತನ್ನ ಅವತಾರ ಮುಗಿಯಿತು ಎಂದುಕೊಂಡು ತೆಪ್ಪಗೆ ಆಕಡೆ ತಿರುಗಿ ಮಲಗಿಕೊಂಡ. ಹೆಂಡತಿ ಕಾಳಜಿಯಿಂದ ಮುಟ್ಟಲು ಬಂದಾಗ ತಣ್ಣಗಾದ ಶಿಶ್ನದ ಅಸಹಾಯಕತೆಯನ್ನು ನೆನೆಸಿಕೊಂಡು ದೂರಸರಿದ. ತಾನು ಅವನಿಗೆ ಇಷ್ಟವಿಲ್ಲವೆಂದು ಆಕೆ ಅ(ಪಾ)ರ್ಥ ಮಾಡಿಕೊಂಡಳು. ಪರಿಣಾಮ? ಷಂಡತನದ ಅಪಾದನೆ ಹೊತ್ತು ಕಟಕಟೆಯಲ್ಲಿ ನಿಲ್ಲಬೇಕಾಯಿತು. ಈ ಆಘಾತದಿಂದ ಚೇತರಿಸಿಕೊಂಡನೋ ಹೇಗೆ ಎಂದು ಗೊತ್ತಾಗಲಿಲ್ಲ.

ಈ ದೃಷ್ಟಾಂತಗಳಿಂದ ಏನು ತಿಳಿದುಬರುತ್ತದೆ? ಕಾಮಕ್ರಿಯೆಗೆ ಬಂದಾಗ ಸಂಗಾತಿಯೊಡನೆ ಮಾಡಬೇಕೆಂದಿದ್ದರೂ ಬಹುಶಃ ಎಲ್ಲ ಪುರುಷರೂ ಒಂಟಿಯೇ! (ಸಲಿಂಗಿಗಳೂ ಇದಕ್ಕೆ ಹೊರತಲ್ಲ.) ಹೇಗೆ? ತಾನು ಗಂಡಸೆಂದು ಹೆಣ್ಣಿಗೆ ತೋರಿಸಿ ಕೊಡಬೇಕು, ಹಾಗೂ ಆಕೆಯಿಂದ ಮೆಚ್ಚುಗೆ ಪಡೆಯಬೇಕು (ಅಥವಾ ಅವಳ ಟೀಕೆಯಿಂದ ತಪ್ಪಿಸಿಕೊಳ್ಳಬೇಕು) ಎಂದು ಹೆಚ್ಚಿನವರು ಆತ್ಮವೀಕ್ಷಣೆ ನಡೆಸುತ್ತಾರೆ. ಇದು ಎರಡು ಸಾಧ್ಯತೆಗಳಿಗೆ ಎಡೆಮಾಡಿಕೊಡುತ್ತದೆ. ಒಂದು: ಸಾಮರ್ಥ್ಯ ಕಡಿಮೆಯೆಂದು ಭ್ರಮಿಸಿ ಭಯಪಟ್ಟು ತನ್ನನ್ನು ಬಯಸುವ ಹೆಣ್ಣಿನಿಂದ ದೂರ ಉಳಿಯುವುದು, ಎರಡು: ಹೆಚ್ಚಿನ ಸಾಮರ್ಥ್ಯ ಇದೆಯೆಂದು ಭ್ರಮಿಸಿ ಅತ್ಯಾತುರದಿಂದ ತನ್ನನ್ನು ಬಯಸದ ಹೆಣ್ಣಿನ ಹತ್ತಿರವಾಗುತ್ತ ಪ್ರಾಬಲ್ಯ ತೋರುವುದು–ಹೆಣ್ಣಿಗಾಗುವ ಲೈಂಗಿಕ ಕಿರುಕಳದಲ್ಲಿ ಈ ಕಾರಣವೂ ಇದೆಯೆಂದು ಅನಿಸುತ್ತದೆ. ಹೀಗಾಗಿ ಹೆಚ್ಚಿನ ಸಂದರ್ಭದಲ್ಲಿ 'ನಾನು ಅವಳಿಗೆ...' ಎನ್ನುವುದಿದೆಯೇ ಹೊರತು 'ನಾವಿಬ್ಬರೂ' ಎನ್ನುವ ಮನೋಭಾವ ಕಾಣುವುದಿಲ್ಲ. ಅದಕ್ಕೆಂದೇ ಲೈಂಗಿಕ ಸಮಸ್ಯೆಗಳು ಎದುರಾದರೆ ಗಂಡಸರು ಸಂಗಾತಿಯ ಜೊತೆಗೆ ಹಂಚಿಕೊಳ್ಳಲು ಮನಸ್ಸು ಮಾಡದೆ ಒಂಟಿಯಾಗಿಯೇ ಉಳಿದು ಸಹಾಯ ಹುಡುಕುತ್ತಾರೆ. 'ಲೈಂಗಿಕ ಸಮಸ್ಯೆಗಳು ಇಬ್ಬರ ನಡುವೆ ಹುಟ್ಟುತ್ತವೆ, ಪರಿಹಾರಕ್ಕೆ ಸಂಗಾತಿಯೂ ಅಗತ್ಯ' ಎಂದು ತಿಳಿಸಿಕೊಟ್ಟರೂ ಒಂದೇ ಸಲಕ್ಕೆ ಅರ್ಥಮಾಡಿಕೊಳ್ಳುವವರು ವಿರಳ. ಅಷ್ಟಲ್ಲದೆ ಇದಕ್ಕೆ ಇನ್ನೆರಡು ಮಗ್ಗಲುಗಳೂ ಇವೆ. ಹೆಚ್ಚಿನ ಗಂಡಸರು ತಮ್ಮ ಲೈಂಗಿಕ ಸಮಸ್ಯೆಯನ್ನು 'ಸಮಸ್ಯೆ' ಎನ್ನದೆ 'ಲೈಂಗಿಕ ದೌರ್ಬಲ್ಯ' ಎಂದು ವರ್ಗೀಕರಿಸುತ್ತಾರೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದರ ಬದಲು ದೌರ್ಬಲ್ಯವನ್ನು ತಮ್ಮ ವ್ಯಕ್ತಿತ್ವಕ್ಕೆ ಅನ್ವಯಿಸಿಕೊಂಡು ನರಳುತ್ತಾರೆ. ಸಾಕಾಗದ್ದಕ್ಕೆ, ಸಂಗಾತಿಗೆ ಸಮಸ್ಯೆಯಿದ್ದರೆ ಅದನ್ನೂ ತಮ್ಮ ತಲೆಯ ಮೇಲೆ ಹೇರಿಕೊಂಡು ಒದ್ದಾಡುತ್ತಾರೆ. ಉದಾಹರಣೆಗೆ, ಹೆಣ್ಣಿಗೆ ಯೋನಿಸೆಡೆತ ಇರುವಾಗ ಸಂಭೋಗ ಅಸಾಧ್ಯವಾಗುತ್ತದಷ್ಟೆ? ಅದಕ್ಕೆ ನೋವಿನ ಭಯ, ಲೈಂಗಿಕತೆಯ ಸೋಂಕಿಲ್ಲದ ಸಂಸ್ಕಾರ, ಲೈಂಗಿಕ ದುರ್ವರ್ತನೆಗೆ ಒಳಗಾದ ಅನುಭವ ಮುಂತಾದ ಅವಳದೇ ಕಾರಣಗಳಿದ್ದರೂ ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಬದಲಾಗಿ ತಮ್ಮ ಶಿಶ್ನದ ಗಡಸುತನವನ್ನು ಹೆಚ್ಚಿಸಿಕೊಳ್ಳಲು, ಹೆಚ್ಚುಹೊತ್ತು ಉಳಿಸಿಕೊಳ್ಳಲು ಒದ್ದಾಡುತ್ತಾರೆ. (ಓದಿ; ವ್ಯವಸ್ಥೆಯ ಬಲಿಪಶು, 110112) ಹೆಂಡತಿಯ ಯೋನಿಸೆಡೆತಕ್ಕೆ ವಯಾಗ್ರ ನುಂಗಿದ ಗಂಡಂದಿರು ಸಾಕಷ್ಟಿದ್ದಾರೆ. ಪರಿಣಾಮವಾಗಿ ಸಮಾಗಮ ಆಗುವುದು ಒತ್ತಟ್ಟಿಗಿರಲಿ, ಸಮಸ್ಯೆಯು ಅವರ ಜನನಾಂಗಗಳನ್ನು ದಾಟಿ ಸಂಬಂಧಕ್ಕೂ ಹರಡುತ್ತದೆ.

ಪುರುಷರು ಲೈಂಗಿಕ ಸಾಮರ್ಥ್ಯಕ್ಕೆ ಇಷ್ಟೇಕೆ ಮಹತ್ವ ಕೊಡುತ್ತಾರೆ? ಗಂಡಸಾದರೂ 'ಇನ್ನೂ ಹೆಚ್ಚು ಗಂಡಸಾಗಲು' ಏಕೆ ಹಪ/ಹಪಿಸುತ್ತಾರೆ? ಸಂಗಾತಿಯ ಸಮಸ್ಯೆಯನ್ನು ತಮ್ಮ ತಲೆಯ ಮೇಲೆ ಯಾಕೆ ಹೊತ್ತುಕೊಳ್ಳುತ್ತಾರೆ? ಸಂಗಾತಿಯಿದ್ದರೂ ಯಾಕೆ ಒಂಟಿಯಾಗುತ್ತಾರೆ? ಇದಕ್ಕೆಲ್ಲ ರಾಶಿ ಕಾರಣಗಳಿವೆ. ಇವುಗಳನ್ನು ಮುಂದಿನ ಸಲ ಕೆದಕೋಣ.

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.